O.S. No: 122/2019
DW-1

(ಇಂದು ದಿನಾಂಕ: 05-03-2024 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದು ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ವಿ.ಬಿ.ಆರ . ವಕೀಲರಿಂದ :-**

ನಾನು 2002 ರ ನಂತರ ರಾಯಚೂರಿನಲ್ಲಿ ವಾಸವಿದ್ದೆನೆ, ಆ ಮುಂಚೆ ಮಟಮಾರಿ,ಜಗರಕಲ್, ರೋಡಲಬಂಡ, ಮುಂತಾದಕಡೆ ಕೆಲಸಮಾಡುತ್ತಿದೇನು. ನಾನು 1988 ರಲ್ಲಿ ಜಗರಕಲನಲ್ಲಿ ಕೆಲಸಮಾಡುತ್ತಿದ್ದೆನು. ಒಂದು ವರ್ಷದ ನಂತರ ರೋಡಲಬಂಡಗೆ ನನಗೆ ವರ್ಗಾವಣೆಯಾಗಿರುತ್ತದೆ, ನಂತರ ರಾಯಚೂರಿನಲ್ಲಿ ಒಂದು ವರ್ಷ ಕೆಲಸ ಮಾಡಿರುತ್ತೇನೆ. ಅದಾದ ನಂತರ ಮಟಮಾರಿಯಲ್ಲಿ ಒಂದು ವರ್ಷ ಕೆಲಸ ಮಾಡಿರುತ್ತೇನೆ. ಅದಾದ ನಂತರ ಮುದಗಲನಲ್ಲಿ ಸುಮಾರು 9 ವರ್ಷ ಕೆಲಸ ಮಾಡಿರುತ್ತೇನೆ. ನಂತರ ಮುಂದಿನ ಅಭ್ಯಾಸಕ್ಕಾಗಿ ಮಂಗಳೂರಿಗೆ ಹೋಗಿರುತ್ತೇನೆ. 2002 ರಲ್ಲಿ ನಾನು ಪಿ.ಜಿ. ಮುಗಿಸಿರುತ್ತೇನೆ ಅದಾದ ನಂತರ ಜಿಲ್ಲಾ ಆಸ್ಪತೆಯಲ್ಲಿ ನೌಕರಿ ಮಾಡುತ್ತಿದ್ದೇನೆ. ನಾನು ಬೇರೆ ಬೇರೆ ಕಡೆ ನೌಕರಿ ಮಾಡುತ್ತಿದ್ದರಿಂದ ದಾವಾ ಆಸ್ತಿಯ ದಾಖಲೆಯನ್ನು ಸರಿಯಾಗಿ ನೋಡಿಲ್ಲ ಹಾಗೂ ಸ್ವಾಧೀನಲ್ಲಿ ಇಲ್ಲ ಎಂದರೆ ಸರಿಯಲ್ಲ.

2) ಬಾಷುಮಿಯಾ ಇತನು ದಾವಾ ಆಸ್ತಿಯನ್ನು ಬಾಷುಸಾಬ ಇವರಿಗೆ ಮೊದಲೆ ಮಾರಾಟ ಮಾಡಿದ್ದ ಎಂದರೆ ಸರಿಯಲ್ಲ. ಸದರಿ ಆಸ್ತಿ ಬೇರೆ, ದಾವಾ ಆಸ್ತಿ ಬೇರೆ ಇರುತ್ತದೆ. ದಾವಾ ಆಸ್ತಿ ಖುಲ್ಲಾ ಜಾಗ ಇರುವುದರಿಂದ ಅದರ ಸ್ವಾಧೀನದಲ್ಲಿ ಇಲ್ಲ, ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದೇನೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ನಗರಸಭೆ ಅಧಿಕಾರಿಗಳ ಜೊತೆ ಶಾಮಿಲಾಗಿ ಕೊಟ್ಟಿ ಪಾರ್ಮ ನಂ.3 ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಮಾಲೀಕನು ಅಲ್ಲ ಮತ್ತು ಅದರ ಸ್ವಾಧೀನದಾರನು ಅಲ್ಲ ಎಂದರೆ ಸರಿಯಲ್ಲ.

-ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು